**PW-4**

**ದಿನಾಂಕಃ 23.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕಃ- ಶ್ರೀ ಎ.ಸಿ.ಕೆ. ವಕೀಲರಿಂದಃ-**

1) ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ಓದಿಸಿ ತಿಳಿದುಕೊಂಡು ಸರಿ ಎಂದು ದೃಢೀಕರಿಸಿ ನಾನು ನನ್ನ ಸಹಿ ಮಾಡಿದ್ದೇನೆ.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೃತ ಬಾಳಪ್ಪಾ ಮಾಡಿಟ್ಟ ಮೃತ್ಯುಪತ್ರ ಹಾಗೂ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಮೃತ್ಯುಪತ್ರ ಹಾಗೂ ಬಾಳಪ್ಪಾ ಸಹಿಯನ್ನು ನೋಡಿ ಗುರುತಿಸಿದ್ದು, ಮೃತ್ಯುಪತ್ರವನ್ನು ಈಗಾಗಲೇ ನಿ.ಪಿ 9 ಹಾಗೂ ಬಾಳಪ್ಪಾನ ಸಹಿಯನ್ನು ನಿ.ಪಿ.9(ಎ) ಅಂತಾ ಗುರುತಿಸಲಾಗಿದೆ. ಸಾಕ್ಷಿ ನಿಪಿ 9 ದಾಖಲೆ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 9(ಸಿ) ಎಂದು ಗುರುತಿಸಲಾಗಿದೆ. ಸಾಕ್ಷಿ ಸದರಿ ಮೃತ್ಯುಪತ್ರಕ್ಕೆ ಹಾಜರಿದ್ದ ಇನ್ನೊಬ್ಬ ಸಾಕ್ಷಿದಾರನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 9(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ದಸ್ತ ಬರಹಗಾರರ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 9(ಡಿ) ಅಂತಾ ಗುರುತಿಸಲಾಗಿದೆ.

**ಪಾಟೀ ಸವಾಲುಃ** ಎದುರುಗಾರರು ಯಾರು ಇಲ್ಲದೇ ಇದ್ದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು

ಸತ್ರ ನ್ಯಾಯಾಧೀಶರು ಚಿಕ್ಕೋಡಿ .